# ರಾಮಕೃಷ್ಣ ಮಹಾಸಂಘದ ಹದಿನಾರನೆಯ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರ ಮಹಾಸಮಾಧಿ



ರಾಮಕೃಷ್ಣ ಮಹಾಸಂಘದ ೧೬ನೇ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ೨೦೨೪ರ ಮಾರ್ಚ್ ೨೬, ಮಂಗಳವಾರದಂದು ರಾತ್ರಿ ೮.೧೪ಕ್ಕೆ ಕೊಲ್ಕತ್ತಾದ 'ರಾಮಕೃಷ್ಣ ಮಿಷನ್ ಸೇವಾ ಪ್ರತಿಷ್ಠಾನ' ಆಸ್ಪತ್ರೆಯಲ್ಲಿ ಮಹಾ ಸಮಾಧಿಯನ್ನು ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೯೪ ವರ್ಷ ವಯಸ್ಸಾಗಿತ್ತು . ಜ್ವರ ಹಾಗೂ ಇತರ ಅನಾರೋಗ್ಯಗಳ ನಿಮಿತ್ತ ಅವರನ್ನು ಚಿಕಿತ್ಸೆಗಾಗಿ ೨೦೨೪ರ ಜನವರಿ ೧೮ರಂದು ಕೊಲ್ಕತ್ತಾದ 'ಸೇವಾ ಪ್ರತಿಷ್ಠಾನ' ಕ್ಕೆ ಸೇರಿಸಲಾಗಿತ್ತು. ಅವರಿಗೆ ಅತ್ಯುತ್ತಮ ವೈದ್ಯಕೀಯ ಚಿಕಿತ್ಸೆ ನೀಡಲಾಗಿದ್ದರೂ, ಕ್ರಮೇಣ ಅವರ ಆರೋಗ್ಯ ಹದಗೆಡುತ್ತ ಬಂದಿತ್ತು .

ಪರಮಪೂಜ್ಯ ಸ್ವಾಮೀಜಿಯವರು ೧೯೨೯ರಲ್ಲಿ ತಮಿಳು ನಾಡಿನ ತಂಜಾವೂರು ಜಿಲ್ಲೆಯ ಅಂದಾಮಿ ಎಂಬ ಹಳ್ಳಿಯಲ್ಲಿ ಜನಿಸಿದರು. ತೀರ ಎಳೆಯ ವಯಸ್ಸಿನಲ್ಲಿಯೇ ಅವರ ತಾಯಿ ತೀರಿಕೊಂಡರು. ಅವರ ಅತ್ತೆಯೇ ಅವರನ್ನು ಬೆಳೆಸಿದರು. ೧೯೪೬ ರಲ್ಲಿ ಅವರು ಚೆನ್ನೈನಲ್ಲಿ ಉತ್ತಮ ಫಲಿತಾಂಶದೊಂದಿಗೆ ತಮ್ಮ ಸೆಕೆಂಡರಿ ತರಗತಿಯನ್ನು ಪೂರೈಸಿದರು. ಅವರ ತಂದೆ ನಾಸಿಕ್‌ನಲ್ಲಿ ಉದ್ಯೋಗದಲ್ಲಿದ್ದುದರಿಂದ ಮುಂದಿನ ವಿದ್ಯಾಭ್ಯಾಸಕ್ಕಾಗಿ ಅವರು ಅಲ್ಲಿಗೆ ತೆರಳಿದರು. ಕಾಮರ್ಸ್‌ನಲ್ಲಿ ಡಿಪ್ಲೊಮಾ ಪದವಿಯನ್ನು ಪಡೆದ ಅವರು ಮುಂದೆ ೧೯೪೯ರಲ್ಲಿ ಮುಂಬೈಗೆ ಹೋಗಿ, ಅಲ್ಲಿ ಉದ್ಯೋಗ ಮಾಡುತ್ತ ತಮ್ಮ ಅಧ್ಯಯನವನ್ನು ಮುಂದುವರಿಸಿದರು.

ಸ್ವಾಮೀಜಿಯವರು ವ್ಯಾಪಕವಾಗಿ ಓದುವ ಹವ್ಯಾಸವುಳ್ಳವರಾಗಿದ್ದರು. ಅವರು ಅನೇಕ ಇಂಗ್ಲಿಷ್ ಸಾಹಿತ್ಯ ಕೃತಿಗಳನ್ನು ಹಾಗೂ ನೆಪೋಲಿಯನ್ ಹಿಲ್ ಬರೆದ 'ಸ್ವ-ಸಹಾಯ' (self-help) ವಿಷಯಕವಾದ ಗ್ರಂಥಗಳನ್ನು ಓದಿದರು. ಮಹಾತ್ಮಾ ಗಾಂಧೀಜಿಯವರ ಚಿಂತನೆಗಳಿಂದಲೂ ಅವರು ಪ್ರಭಾವಿತರಾಗಿದ್ದರು. ಗಾಂಧೀಜಿಯವರು ನಿರ್ದೇಶಿಸಿದಂತೆ 'ಶ್ರೀರಾಮ' ಎಂದು ನಾಮಜಪ ಮಾಡುವುದನ್ನು ರೂಢಿಸಿಕೊಂಡರು. ಇದು ಅವರ ಜೀವನದಲ್ಲೇ ಒಂದು ಹೊಸ ತಿರುವನ್ನು ನೀಡಿತು ಹಾಗೂ ಅವರ ಮುಂದಿನ ಜೀವನವನ್ನು ರೂಪಿಸುವುದರಲ್ಲಿ ಮಹತ್ತರ ಪಾತ್ರವನ್ನು ವಹಿಸಿತು. ಕೆಲವೊಮ್ಮೆ ಅವರು ಮುಂಬೈನಲ್ಲಿರುವ ವೊರ್ಲಿ ಸಮುದ್ರತೀರಕ್ಕೆ ಹೋಗಿ ಏಕಾಂತವಾಗಿ ನಡೆದಾಡಿ, ಅಲ್ಲಿನ ದೊಡ್ಡ ಬಂಡೆಗಳ ಮೇಲೆ ಕುಳಿತು ಸೂರ್ಯಾಸ್ತವನ್ನು ನೋಡುತ್ತ ಮೌನವಾಗಿ ಕಾಲ ಕಳೆಯುತ್ತಿದ್ದರು. ಒಂದು ದಿನ ಹೀಗೆ ಕುಳಿತಿದ್ದಾಗ ಅವರ ಮನಸ್ಸಿನಲ್ಲೊಂದು ಆಲೋಚನೆ ಮೂಡಿ ಬಂತು : 'ನಿಜ, ಈ ಬಂಡೆಗಳು ದೊಡ್ಡ ಗಾತ್ರದವು; ಸಮುದ್ರ ವಿಶಾಲವಾಗಿದೆ, ಆಕಾಶ ಅನಂತವಾಗಿದೆ. ಹಾಗಿದ್ದರೆ ನಾನು ಏನಾಗಿದ್ದೇನೆ? ವಿಶಾಲವಾದ ಭೂಮಿಯ ಮೇಲ್ಮೈಯಲ್ಲಿ ಒಂದು ಕಣ ಮಾತ್ರ. ಆದ ಕಾರಣ, ಇದಕ್ಕೆ ಅಷ್ಟೊಂದು ಮಹತ್ವವನ್ನೇಕೆ ನೀಡಬೇಕು?' ಕೂಡಲೇ ಉತ್ತರ ಮಿಂಚಿತು: 'ಈ ವಿಶಾಲ ಭೂಮಿಯ ಮೇಲ್ಮೈಯಲ್ಲಿ ನೀನೇನೋ ಕಣದಂತೆ ಕಾಣಿಸುತ್ತೀಯೆ, ನಿಜ. ಆದರೆ ನಿನ್ನೊಳಗಿರುವ ಮಹಾನ್ ಅಸ್ತಿತ್ವ ಮಾತ್ರ ಈ ಜಗತ್ತಿಗಿಂತಲೂ ದೊಡ್ಡದು.' ಈ ಆಲೋಚನೆ ತುಂಬ ಶಕ್ತಿಪೂರ್ಣವಾಗಿತ್ತು – ಯಾರೋ ಈ ಮಾತುಗಳನ್ನು ತಮ್ಮ ಕಿವಿಗಳ ಸಮೀಪ ಉಲಿಯುತ್ತಿರುವಂತೆ ಅವರಿಗೆ ಭಾಸವಾಗಿತ್ತು. ಅವರ ಮನಸ್ಸಿನಲ್ಲಿ ಈ ಆಲೋಚನೆ ಸ್ಥಿರವಾಗಿ ನಿಂತುಬಿಟ್ಟಿತು. ಆಗಿನ್ನೂ ಅವರು ಗೀತೆ, ಉಪನಿಷತ್ತುಗಳನ್ನು ಓದಿರಲಿಲ್ಲ.

*೪೩ನೇ ಪುಟಕ್ಕೆ...*